ಜಲ ಸಾಹಸ ಕೇಂದ್ರಕ್ಕೆ (ಚೇತನ) ಒದಗಿಸಿದ ಅನುದಾನ

321

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ)

ಅ) ಹೊಸದುರ್ಗ ತಾಲ್ಲೂಕು ವಾಣಿವಿಲಾಸ ಸಾಗರದ ಹಿನ್ನೀರಿನ ಪ್ರದೇಶ ಕೇಂದ್ರದಲ್ಲಿ ಜಲಸಾಹಸ ಕೇಂದ್ರಕ್ಕೆ (ಚೇತನ) ಬಿಡುಗಡೆಯಾದ ಅನುದಾನವೆಷ್ಟು?

ಆ) ಈ ಕೇಂದ್ರದಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳೇನು? ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು

ಅ) ರೂ. 66.47 ಲಕ್ಷಗಳು. ಬಿಡುಗಡೆಯಾಗಿರುತ್ತದೆ.

ಆ) 950 ಸರ್ಕಾರಿ ಶಾಲಾ ಮಕ್ಕಳಿಗೆ ಕಯಾಕಿಂಗ್, ಕೂರ್ಯಾಕಲ್, ಕೆನೊಯಿಂಗ್ ರ್‍ಯಾಫ್ಟಿಂಗ್, ಸೆಲಿಂಗ್, ವಿಂಡ್ ಸರ್ಫಿಂಗ್, ಪ್ಯಾಡ್ಲಿಂಗ್, ಜೇಟ್‌ಸ್ಕಿಯಿಂಗ್ ಇವೇ ಮೊದಲಾದ ಜಲಸಾಹಸ ಕ್ರೀಡೆ ಹಾಗೂ ಪ್ರಕೃತಿ ಅಧ್ಯಯನ ಶಿಬಿರಗಳನ್ನು ಸುರಕ್ಷಿತವಾಗಿ ಆಯೋಜಿಸಲಾಗುತ್ತಿದೆ.

ದಿನಾಂಕ 17–08–2012 ರಿಂದ ಪ್ರಾರಂಭಿಸಲಾಯಿತು.

ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಬೆಳೆ ನಷ್ಟಗೊಂಡ ರೈತರಿಗೆ ಪರಿಹಾರ

(251) 224

ಶ್ರೀ ರಾಜು.ಕೆ (ರಾಮನಗರ)

ಅ) ರಾಜ್ಯದಲ್ಲಿ ಪ್ರಕೃತಿ ವಿಕೋಪ ಸಂಭವಿಸಿದಾಗ ಹಾನಿಗೆ ತುತ್ತಾದ ರೈತರಿಗೆ ಬೆಳೆ ನಷ್ಟವಾಗಿ ಎಕರೆಗೆ ಎಷ್ಟು ಪರಿಹಾರ ಧನವನ್ನು ನೀಡಲಾಗುತ್ತಿದೆ? ಪರಿಹಾರ ಧನ ನೀಡುವ ಅಧಿಕಾರವನ್ನು ಯಾರಿಗೆ ನೀಡಲಾಗಿದೆ?

ಆ) ಈಗ ನೀಡುತ್ತಿರುವ ಬೆಳೆ ನಷ್ಟ ಪರಿಹಾರದ ಬದಲಾಗಿ ಎಕರೆಗೆ ರೂ.5000/–ಕ್ಕೆ ಹೆಚ್ಚಿಸಿ ನೀಡುವ ಪ್ರಸ್ತಾನವೆ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗಿನಿಂದ ರೈತರಿಗೆ ಬೆಳೆ ನಷ್ಟವನ್ನು ರೂ.5000/–ಕ್ಕೆ ಹೆಚ್ಚಿಸಿ ನೀಡಲಾಗುವುದು?

ಶ್ರೀ ಕೆ.ಎಸ್.ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು)

ಅ) 2011–12ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಅಂದಿನ ಮಾರ್ಗಸೂಚಿಗಳು ಅನ್ವಯವಾಗುತ್ತಿತ್ತು. ಅದರನ್ವಯ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ Input Subsidy ನೀಡಲು ಕೇಂದ್ರ ಸರ್ಕಾರದಿಂದ ನಿರೀಕ್ಷಿತ ಮಟ್ಟದಲ್ಲಿ ಅನುದಾನ ಲಭ್ಯವಾಗದ ಕಾರಣ ಮಾರ್ಗಸೂಚಿಗಳ ಪ್ರಕಾರ ಲೆಕ್ಕಮಾಡಿ ಕನಿಷ್ಠ ರೂ.250/–ಕ್ಕೆ ಹಾಗೂ ಗರಿಷ್ಠ ರೂ.1,000/–ನಂತೆ ಹಾಗೂ ಬಹುವಾರ್ಷಿಕ ಹಣ್ಣು ಮತ್ತು Plantation / Perennial crops ಗೆ ಪ್ರತಿ ರೈತರಿಗೆ ರೂ.2000/–ಕ್ಕೆ ಸೀಮಿತಗೊಳಿಸಿ Input Subsidy ನೀಡಲು ರೂ.232.00 ಕೋಟಿ ಅನುದಾನ ಸಂತ್ರಸ್ಥರಿಗೆ ವಿತರಿಸಲಾಗಿದೆ.

2012–13ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಮಾರ್ಗಸೂಚಿಗಳನ್ನು ಪರಿಷ್ಕರಿಸಿದೆ. ಅದರನ್ವಯ ರೈತರಿಗೆ Input Subsidy ನೀಡಲು ಎಕರೆಗೆ ಈ ಕೆಳಕಂಡಂತೆ ಪರಿಹಾರ ಧನ ನಿಗದಿ ಪಡಿಸಲಾಗಿದೆ

1. ಮಳೆಯಾಧಾರಿತ ಪ್ರದೇಶಕ್ಕೆ ಎಕರೆಗೆ– ರೂ.1200.00
2. ನೀರಾವರಿ ಬೆಳೆ ಎಕರೆಗೆ– ರೂ 2400.00
3. ತೋಟಗಾರಿಕೆ ಬೆಳೆ ಎಕರೆಗೆ– 3200.00

2012–13ನೇ ಸಾಲಿನಲ್ಲಿ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ Input Subsidy ನೀಡಲು ಕೇಂದ್ರ ಸರ್ಕಾರದಿಂದ ನಿರೀಕ್ಷಿತ ಮಟ್ಟದಲ್ಲಿ ಅನುದಾನ ಲಭ್ಯವಾಗದ ಕಾರಣ ಮೇಲ್ಕಂಡ ಮಾರ್ಗಸೂಚಿಗಳ ಪ್ರಕಾರ ಲೆಕ್ಕಮಾಡಿ ಕನಿಷ್ಠ ರೂ.500/–ಕ್ಕೆ ಹಾಗೂ ಗರಿಷ್ಠ ರೂ.2000/– ನಂತೆ ಹಾಗೂ ಬಹುವಾರ್ಷಿಕ ಹಣ್ಣು ಮತ್ತು Plantation / Perennial crops ಗೆ ಪ್ರತಿ ರೈತರಿಗೆ ಕನಿಷ್ಠ ರೂ.1000/– ಹಾಗೂ ಗರಿಷ್ಠ ರೂ.4000/– ಕ್ಕೆ ಸೀಮಿತಗೊಳಿಸಿ Input Subsidy ನೀಡಲು ರೂ.327.00 ಕೋಟಿ ಅನುದಾನ ಸಂತ್ರಸ್ಥರಿಗೆ ವಿತರಿಸಲು ಕ್ರಮ ವಹಿಸಲಾಗಿದೆ.

ಪರಿಹಾರ ಧನವನ್ನು ನೀಡುವ ಅಧಿಕಾರವನ್ನು ಈ ದರದಲ್ಲಿ ರೈತರಿಗೆ Agriculture Input Subsidy ನೀಡಲು ತಹಶೀಲ್ದಾರ್ ರವರಿಗೆ ನೀಡಲಾಗಿದೆ.

ಆ) ಬೆಳೆ ಹಾನಿ ಪರಿಹಾರವನ್ನು ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಮಾರ್ಗಸೂಚಿಯ ಪ್ರಕಾರ ನೀಡಬಹುದಾಗಿದ್ದು ರಾಜ್ಯ ಸರ್ಕಾರದ ಮುಂದೆ ಈ ಪ್ರಸ್ತಾವನೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಅಧಿಕಾರಿಗಳ ಕೊರತೆ

(199) 127

ಡಾ: ಮಾಲಕರೆಡ್ಡಿ ಎ.ಬಿ.(ಯಾದಗಿರಿ)

ಅ) ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಬಹುತೇಕ ಇಲಾಖೆಗಳಿಗೆ ಪ್ರಭಾರ ಅಧಿಕಾರಿಗಳು ನೇಮಕಗೊಂಡಿದ್ದು, ಖಾಯಂ ಅಧಿಕಾರಿಗಳಿಲ್ಲದೆ ಅಭಿವೃದ್ಧಿ ಕೆಲಸಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಪ್ರಭಾರ ಅಧಿಕಾರಿಗಳು ಅವರವರ ಜಿಲ್ಲೆಗಳ ಕೆಲಸಗಳಲ್ಲಿ ತಲ್ಲೀನರಾಗಿ ಈ ಜಿಲ್ಲೆಯತ್ತ ಗಮನ ಹರಿಸಲು ಸಾಧ್ಯವಾಗದೆ ಜನತೆಗೆ ತೊಂದರೆಯಾಗಿದ್ದರೂ ಸರ್ಕಾರ ಈವರೆಗೂ ಖಾಯಂ ಅಧಿಕಾರಿಗಳ ನೇಮಕಕ್ಕೆ ಕ್ರಮ ವಹಿಸದೆ ಇರುವುದಕ್ಕೆ ಕಾರಣಗಳೇನು?

ಇ) ಬಹುತೇಕ ಇಲಾಖೆಗಳಲ್ಲಿ ಪ್ರಧಾನ ಅಧಿಕಾರಿಗಳು ಇಲ್ಲದೆ ಕೇವಲ ಪ್ರಥಮ ದರ್ಜೆ ಸಹಾಯಕರು ಸೂಪರಿಡೆಂಟ್‌ರಿಂದಲೇ ಕಛೇರಿ ನಡೆಯುತ್ತಿದ್ದು, ನಿರ್ಧಾರ/ವಿಷಯಗಳ ಕ್ರಮ ಕೈಗೊಳ್ಳುವ ಅಧಿಕಾರವಿಲ್ಲದೆ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕೆಲ ಕಛೇರಿಗಳಲ್ಲಿ ಅಧಿಕಾರಿಗಳಿದ್ದರೆ ಸಿಬ್ಬಂದಿಗಳಿರುವುದಿಲ್ಲ. ಸಿಬ್ಬಂದಿಗಳು ಇದ್ದರೆ ಅಧಿಕಾರಿಗಳಿಲ್ಲದೆ ಹಾಗೂ ಕಂಪ್ಯೂಟರ್, ದೂರವಾಣಿಯು ಇಲ್ಲದೆ ಇರುವುದರಿಂದ ಸಾರ್ವಜನಿಕ ಕೆಲಸಕ್ಕೆ ತೊಂದರೆಯಾಗಿ ಹಿಂದುಳಿದ ಜಿಲ್ಲೆ ಅಭಿವೃದ್ಧಿಯಿಂದ ವಂಚಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಯಾದಗಿರಿ ಜಿಲ್ಲೆ ರಚನೆಯಾಗಿದ್ದರೂ ಇನ್ನೂ ಪೂರ್ಣ ಪ್ರಮಾಣದ ಅಧಿಕಾರಿಗಳ ನೇಮಕವಾಗದೆ ಇರಲು ಕಾರಣವೇನು?